ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-19 ಸಂಚಿಕೆ-2 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ದೇವಸ್ಥಾನಕ್ಕೆ ನೂತನ ಛಾವಣಿ



ಉಡುಪಿಯ ಕುಂಜಿಬೆಟ್ಟಿನಲ್ಲಿ ನಮ್ಮ ಸಂಘದ ಆಡಳಿತದಲ್ಲಿರುವ ಶ್ರೀ ಶಾರದಾ ದೇವಸ್ಥಾನವು ಸಮಾಜಕ್ಕೆ ಸಮರ್ಪಿತವಾದದ್ದು 1988ನೇ ಇಸವಿಯಲ್ಲಿ. ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಮದಭಿನವ ವಿದ್ಯಾತೀರ್ಥ ಮಹಾಸ್ವಾಮೀಜಿಗಳವರ ಹಾಗೂ ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮೀಜಿಗಳವರ ಶುಭಾಶೀರ್ವಾದಗಳೊಂದಿಗೆ ಅವರ ಉಪಸ್ಥಿತಿಯಲ್ಲಿ ಪ್ರತಿಷ್ಠಾಮಹೋತ್ಸವವು 1988ನೇ ಇಸವಿಯ ಮಾರ್ಚ್ 13ರಂದು ನೆರವೇರಿತ್ತು. ಆರಂಭದಲ್ಲಿ ಕೇವಲ ಗರ್ಭಗುಡಿ ಮಾತ್ರ ಇದ್ದ ಈ ಪೂಜಾಸ್ಥಳಕ್ಕೆ ಮುಂದೆ ಸುತ್ತು ಪೌಳಿಯನ್ನು ಸೇರಿಸಿ ವಿಸ್ತರಿಸಲಾಯಿತು.

ಮಳೆಗಾಲದಲ್ಲಿ ಚಾವಣಿ ಸೋರುವುದು ಕಾಂಕ್ರೀಟಿನ ಕಟ್ಟಡಗಳಲ್ಲಿ ಯಾವತ್ತೂ ಕಾಡುವ ತೊಂದರೆ. ಹಾಗೆಯೇ ಎರಡು ಹಂತಗಳಲ್ಲಿ ರಚನೆಯಾದ ನಮ್ಮ ಈ ದೇವಸ್ಥಾನದ ಕಟ್ಟಡವೂ ಮಳೆಗಾಲದಲ್ಲಿ ಸೋರುವುದು ದೊಡ್ಡ ತಾಪತ್ರಯವಾಗಿತ್ತು. ಪ್ರತೀ ಬೇಸಗೆಯಲ್ಲಿ ರಿಪೇರಿ, ಮತ್ತೆ ಮಳೆಗಾಲದಲ್ಲಿ ಸೋರುವುದು ಪ್ರತೀ ವರ್ಷದ ಕಥೆಯಾಗಿತ್ತು. ಈ ವರ್ಷ ಅಧಿಕಾರವಹಿಸಿಕೊಂಡ ನೂತನ ಆಡಳಿತ ಮಂಡಳಿಯು ಇದಕ್ಕೊಂದು ಶಾಶ್ವತ ಪರಿಹಾರ ಕಂಡು ಹಿಡಿಯಬೇಕೆಂದು ಸಂಕಲ್ಪಿಸಿತು. ದೇವಸ್ಥಾನದ ಸೂರಿನ ಮೇಲೆ ಇನ್ನೊಂದು ಮಾಡು ಮಾಡುವುದು ಮಾತ್ರ ಶಾಶ್ವತ ಪರಿಹಾರವಾದೀತು ಎಂಬ ಅಭಿಪ್ರಾಯ ಬಂದಿತು. ಆದರೆ ಈ ಮಾಡಿನಿಂದ ದೇವಸ್ಥಾನದ ಸೌಂದರ್ಯಕ್ಕೆ ಚ್ಯುತಿ ಬರಬಾರದು ಹಾಗೂ ದೇವಸ್ಥಾನದ ಮುಗುಳಿಯ ಮೇಲೆ ಮಾಡು ಬರಬಾರದೆನ್ನುವ ಅಭಿಪ್ರಾಯಗಳೂ ಬಂದವು.

ಈ ಹಿನ್ನೆಲೆಯಲ್ಲಿ ಉಡುಪಿಯ ಸುತ್ತಮುತ್ತಲಿನಲ್ಲಿ ಇದೇ ಸಮಸ್ಯೆಯಿದ್ದ ಹಲವಾರು ದೇವಸ್ಥಾನಗಳಿಗೆ ಭೇಟಿಯಿತ್ತು ಅಲ್ಲಿ ನಡೆಸಿದ ಕಾಮಗಾರಿಗಳನ್ನು ವೀಕ್ಷಿಸಲಾಯಿತು. ಹಾಗೆಯೇ ನಮ್ಮ ಕಟ್ಟಡಕ್ಕೆ ಸಾಮ್ಯತೆಯಿರುವ ದೇವಸ್ಥಾನಗಳಲ್ಲಿ ಇದೇ ತೊಂದರೆಗೆ ಕಂಡುಕೊಂಡ ಪರಿಹಾರವನ್ನೂ ಪರಿಶೀಲಿಸಲಾಯಿತು. ಇಂತಹಾ ಕಾಮಗಾರಿ ನಡೆಸಿದ ಇಂಜಿನಿಯರರನ್ನು ಹಾಗೂ ಈ ಕೆಲಸದಲ್ಲಿ ಅನುಭವವಿರುವ ಕೆಲಸಗಾರರನ್ನು ಭೇಟಿಯಾಗಿ ಅಭಿಪ್ರಾಯ ಪಡೆದು ಕೊನೆಯಲ್ಲಿ ನಮ್ಮ ದೇವಸ್ಥಾನಕ್ಕೆ ಹಂಚಿನ ಚಾವಣಿಯನ್ನು ಅಳವಡಿಸುವುದಾಗಿ ನಿರ್ಧರಿಸಲಾಯಿತು. ಹಾಗೂ ಶ್ರೀ ದೇವಿಯ ಅನುಗ್ರಹ ಈ ನಿರ್ಧಾರಕ್ಕೆ ಇದ್ದುದರ ಫಲವಾಗಿಯೇ ಕೇವಲ ಒಂದು ತಿಂಗಳ ಅವಧಿಯಲ್ಲಿ ಈ ಕೆಲಸವು ಮುಕ್ತಾಯವಾಯಿತು. ಈ ಹೊಸ ಚಾವಣಿಯಿಂದ ಸೋರುವ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿರುವುದರೊಂದಿಗೆ ದೇವಸ್ಥಾನದ ಸೌಂದರ್ಯವೂ ಇಮ್ಮಡಿಯಾಗಿದೆ ಎಂಬುದು ಭಕ್ತರ ಅಭಿಪ್ರಾಯವಾಗಿದೆ. ಈ ಕಾಮಗಾರಿಯ ಯಶಸ್ಸಿಗೆ ಕಾರಣೀಭೂತರಾದ ಸರ್ವ ಸದಸ್ಯರಿಗೆ, ಇಂಜಿನಿಯರರಾದ ಶ್ರೀ ರಾಘವೇಂದ್ರ ರಾಯರಿಗೆ ಹಾಗೂ ಕ್ಲಪ್ತ ಸಮಯದಲ್ಲಿ ಕೆಲಸವನ್ನು ಅಚ್ಚುಕಟ್ಟಾಗಿ ಪೂರೈಸಿದ ನೇಶನಲ್ ಇಂಜಿನಿಯರ್ಸ್ ಸಂಸ್ಥೆಗೆ ಆಡಳಿತಮಂಡಳಿಯು ಅಭಾರಿಯಾಗಿದೆ.

ದೇವಸ್ಥಾನದ ನೂತನ ಚಾವಣಿಯನ್ನು ವಾಸ್ತುಹೋಮ ಇತ್ಯಾದಿ ಧಾರ್ಮಿಕ ವಿಧಿಗಳೊಂದಿಗೆ ಶ್ರೀದೇವರಿಗೆ ಸಮರ್ಪಿಸುವ ಕಾರ್ಯಕ್ರಮವನ್ನು ತಾ.13.03.2019ರಂದು ಬುಧವಾರ ರಾತ್ರಿ ನಡೆಸುವುದಾಗಿ ನಿರ್ಧರಿಸಲಾಗಿದೆ. ಸಂಜೆ 5 ಗಂಟೆಗೆ ಈ ಕಾರ್ಯಕ್ರಮಗಳು ಆರಂಭಗೊಂಡು ರಾತ್ರಿ ಕೊನೆಗೊಳ್ಳಲಿದೆ. ಸಮಾಜಬಾಂಧವರು ಹಾಗೂ ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕೆಂದು ಸವಿನಯ ಆಮಂತ್ರಣದೊಂದಿಗೆ ಆಮಂತ್ರಿಸುತ್ತಿದ್ದೇವೆ.

–ಆಡಳಿತ ಮಂಡಳಿ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯ ಕರೆಯೋಲೆ



ಪ್ರಿಯರೇ,

ಸ್ವಸ್ತಿ! ಶ್ರೀ ವಿಳಂಬಿ ನಾಮ ಸಂ।ರದ
ಮೀನ ಸಂಕ್ರಮಣ ತಾ.14-03-2019ನೇ ಗುರುವಾರ
**ಶ್ರೀ ಶಾರದಾ ದೇವಸ್ಥಾನದ**
**ಪ್ರತಿಷ್ಠಾ ವರ್ಧಂತಿಯು**
ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

-ಆಡಳಿತ ಮಂಡಳಿ

ಕಾರ್ಯಕ್ರಮ : ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಹಿಳಾ ವೇದಿಕೆಯಿಂದ ಭಜನಾ ಕಾರ್ಯಕ್ರಮ, ಪಾರಾಯಣ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.04-03-2019, ಸೋಮವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘು ಉಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಕೊಳ್ಳೆಗಾಲದಲ್ಲಿ ಇತ್ತೀಚೆಗೆ ಹತ್ತಾರು ಜನ ವಿಷಾಹಾರ ಸೇವನೆಯಿಂದ ನಿಧನರಾದ ವಿಷಯ ಹಾಗೂ ತೀರಾ ಇತ್ತೀಚೆಗೆ ದೇವಸ್ಥಾನವೊಂದರ ಪ್ರಸಾದದಲ್ಲಿ ವಿಷ ಬೆರೆಸಿದ ಎರಡು ಘಟನೆಗಳು ಸಾರ್ವಜನಿಕರಿಗೆ ಔತಣಕೂಟವನ್ನು ಆಯೋಜಿಸುವ ಸಂಸ್ಥೆಗಳು ಎಚ್ಚೆತ್ತು ಕೊಳ್ಳಬೇಕಾದ ಘಟನೆಗಳು. ಈ ಘಟನೆಗಳಲ್ಲಿ ದೇವಸ್ಥಾನದ ಆಡಳಿತದವರು ಭೋಜನಕೂಟದ ಆಯೋಜಕರಾಗಿದ್ದರೆ, ಯಾರೋ ಬೇರೆಯವರು ಅವರಿಗೆ ತಿಳಿಯದಂತೆ ತಮ್ಮ ಸ್ವಂತ ದ್ವೇಷ ಸಾಧನೆಗಾಗಿ ವಿಷ ಬೆರೆಸಿದ್ದರು. ಭೋಜನಕೂಟವೊಂದರ ಆಯೋಜನೆಯಲ್ಲಿ ನೂರಾರು ಜನರು ಭಾಗಿಗಳಾಗಿರುವಾಗ ಪ್ರತಿಯೊಬ್ಬರ ಮೇಲೆ ಕಣ್ಣಿಡುವುದು ಅಸಾಧ್ಯದ ಮಾತು. ಆದುದರಿಂದ ಇನ್ನು ಮುಂದೆಯೂ ಇಂತಹಾ ಘಟನೆಗಳು ಮರುಕಳಿಸುವ ಸಾಧ್ಯತೆಗಳು ಇದ್ದೇ ಇವೆ. ಆದುದರಿಂದ ಭೋಜನಕೂಟವನ್ನು ಆಯೋಜಿಸುವ ಪ್ರತಿಯೊಂದು ಸಂಸ್ಥೆಯೂ ತಮ್ಮ ಕಾರ್ಯಕ್ರಮಗಳನ್ನು ದುರುಳರು ದುರುಪಯೋಗಪಡಿಸಿಕೊಳ್ಳದಂತೆ ಮುಂಜಾಗರೂಕತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ.


ಆಹಾರದಲ್ಲಿ ವಿಷಬೆರೆಸಿದ್ದು ದ್ವೇಷದ ಮಾತಾಯಿತು. ಆದರೆ ಹಲವಾರು ಭಾರಿ ಇಂತಹಾ ಔತಣಕೂಟದ ನಂತರ ವಿಷಾಹಾರ ಸೇವನೆಯಿಂದ ಆಸ್ಪತ್ರೆ ಸೇರಿದ ವರದಿಗಳನ್ನು ಕೇಳಿರಬಹುದು. ಈ "ವಿಷಾಹಾರ"ದ ಕೇಸುಗಳು ನಿಜಕ್ಕಾಗಿಯಾದರೂ ವಿಷದಿಂದಾದ್ದಲ್ಲ. ಇದು ಕೆಟ್ಟ ಆಹಾರದ ಸೇವನೆಯಿಂದಾದ್ದದ್ದು. ಇಂತಹಾ ಕೇಸುಗಳಲ್ಲಿ ಊಟವಾದ ಸ್ವಲ್ಪ ಹೊತ್ತಿನಲ್ಲೇ ಊಟವಾಡಿದವರೆಲ್ಲಾ ಹೊಟ್ಟೆನೋವು ವಾಂತಿಭೇದಿಯಿಂದ ಒದ್ದಾಡಲಾರಂಭಿಸುತ್ತಾರೆ. ಕೆಲವೊಮ್ಮೆ ಇದರಲ್ಲಿಯೂ ಸಾವು ಸಂಭವಿಸುವುದುಂಟು. ಈ ಘಟನೆಗಳಿಗೆ ಕಾರಣ ವಿಷವಲ್ಲ. ವಿಷದಂತಹಾ ವಸ್ತು. ಆಹಾರದಲ್ಲಿರುವ ಕೆಲವು ಬ್ಯಾಕ್ಟೀರಿಯಾಗಳಿಗೆ ಈ ವಿಷದಂತಹಾ ವಸ್ತುವನ್ನು ಉತ್ಪಾದಿಸುವ ಶಕ್ತಿ ಇದೆ. ಹುಳುಕುಹಿಡಿದ ಬೇಳೆ ಕಾಳುಗಳು, ಕೊಳೆತ ತರಕಾರಿ ಹಾಗೂ ಹಣ್ಣುಗಳು ಹಾಗೂ ಬುಗುಟು ಹಿಡಿದ ಪಾತ್ರೆಗಳಲ್ಲಿ ಈ ಜಾತಿಯ ಬ್ಯಾಕ್ಟಿರಿಯಾಗಳು ಇರುತ್ತವೆ ಹಾಗೂ ಅವು ಈ ಆಹಾರವಸ್ತುಗಳಲ್ಲಿ ಮೊದಲೇ ವಿಷವಸ್ತುವನ್ನು ಸೂಸಿ ಇಟ್ಟಿರುತ್ತವೆ. ಆಹಾರವನ್ನು ಬೇಯಿಸಿದಾಗ ಬ್ಯಾಕ್ಟೀರಿಯಾ ಸತ್ತರೂ ಈ ವಿಷವಸ್ತು ಹಾಗೆಯೇ ಇರುತ್ತದೆ. ಹಾಗೂ ಇಂತಹಾ ವಿಷವಸ್ತು ಇದ್ದ ಆಹಾರವನ್ನು ಸೇವಿಸಿದ ಜನರಿಗೆ ಈ ಮೇಲಿನ ಚಿಹ್ನೆಗಳು ಬರುತ್ತವೆ.

ಕೈಕಾಲಿನ ಕಜ್ಜಿ ಗಾಯಗಳಲ್ಲಿಯೂ ಇದೇ ಜಾತಿಯ ಬ್ಯಾಕ್ಟೀರಿಯಾಗಳಿರುತ್ತವೆ. ಇಂತಹಾ ಕಜ್ಜಿ ಗಾಯಗಳಿರುವ ಕೆಲಸಗಾರರಿಂದ ಅಡಿಗೆ ಮಾಡಿಸುವುದರಿಂದ ಕೂಡಾ ಇದೇ ತೊಂದರೆ ಬರಬಹುದು. ಅಡುಗೆ ಮನೆಯ ಹತ್ತಿರ ಶೌಚಾಲಯ ಇರುವುದು, ಇಲಿ ಬೆಕ್ಕುಗಳು ರಾಜಾರೋಷವಾಗಿ ಓಡಾಡುವುದು. ಕೆಲಸದವರಿಗೆ ಅಲ್ಲಲ್ಲಿ ತುರಿಸುವ ಮತ್ತು ಮೂಗುಕಿವಿಗಳಿಗೆ ಬೆರಳು ತೂರಿಸುವ ಅಭ್ಯಾಸಗಳಿರುವುದು, ಕೈತೊಳೆದು ಅಡುಗೆ ಮಾಡುವ ಅಭ್ಯಾಸ ಇಲ್ಲದಿರುವುದು, ಅಡುಗೆ ಪಾತ್ರೆಗಳನ್ನು ಸರಿಯಾಗಿ ತೊಳೆಯದಿರುವುದು, ನೀರನ್ನು ಶುದ್ಧವಾದ ಮೂಲದಿಂದ ಪಡೆದು ಮಾಲಿನ್ಯವಾಗದಂತೆ ಎಚ್ಚರವಹಿಸದಿರುವುದು, ಕಳಪೆ ಆಹಾರ ಪದಾರ್ಥಗಳನ್ನು ಬಳಸುವುದು ಇತ್ಯಾದಿಗಳು ಔತಣಕೂಟವೊಂದರ ನಂತರ ವಾಂತಿ ಭೇದಿಯಂತಹಾ ತೊಂದರೆಗಳು ಕಾಣಿಸಲು ಕಾರಣ. ಅಡುಗೆ ಮನೆಯ ಪರಿಸರವನ್ನು ಸ್ವಚ್ಛವಾಗಿಡುವುದು, ಕೆಲಸದವರ ನಿಯಮಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ, ಕೆಲಸಗಾರರಿಗೆ ಸ್ವಚ್ಛತೆಯ ಪಾಠ, ಪರಿಶುದ್ಧ ನೀರನ್ನು ಒದಗಿಸುವುದು, ಹಾಗೂ ಅಡುಗೆ ಪರಿಕರಗಳನ್ನು ಸ್ವಚ್ಛವಾಗಿಡುವುದು ಇವಿಷ್ಟು ಈ ನಿಟ್ಟಿನಲ್ಲಿ ಸಮಾರಂಭಗಳಿಗೆ ಸಭಾಂಗಣವನ್ನು ಒದಗಿಸುವವರು ನೆನಪಿಡಬೇಕಾದ ಆದ್ಯತೆಯ ವಿಷಯಗಳು.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

ಆಹಾರದ ಸುರಕ್ಷತೆ ಹಾಗೂ ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಸಮಗ್ರ ಕಾನೂನೊಂದನ್ನು ಭಾರತ ಸರಕಾರ 2006ನೇ ಇಸವಿಯಲ್ಲೇ ಜಾರಿಗೆ ತಂದಿತ್ತು. ಸಾರ್ವಜನಿಕರಿಗೆ ಆಹಾರ ತಯಾರಿಸುವ, ಒದಗಿಸುವ, ಮಾರಾಟ ಮಾಡುವ, ಹಂಚುವ ಪ್ರತಿಯೊಬ್ಬರೂ ಈ ಕಾಯಿದೆಯನ್ವಯ ನೊಂದಾಯಿಸುವುದನ್ನು ಹಾಗೂ ಅನುಮತಿ ಪಡೆಯಬೇಕೆನ್ನುವುದನ್ನು ಈ ಕಾಯ್ದೆಯಲ್ಲಿ ವಿಧಿಸಲಾಗಿದೆ. ಹಾಗೆಯೇ ಆಹಾರವನ್ನು ತಯಾರಿಸುವ ಪರಿಸರ ಹೇಗಿರಬೇಕು? ಆಹಾರ ತಯಾರಕರು ಹೇಗಿರಬೇಕು? ಹಂಚುವ ವ್ಯವಸ್ಥೆ ಹೇಗಿರಬೇಕು? ಆಹಾರದ ಸಂಗ್ರಹ ಯಾವ ರೀತಿ ಇರಬೇಕು? ಆಹಾರದ ಗುಣಮಟ್ಟ ಹೇಗಿರಬೇಕು? ಇತ್ಯಾದಿ ವಿಷಯಗಳನ್ನು ಸ್ಪಷ್ಟವಾಗಿ ಈ ಕಾನೂನಿನಲ್ಲಿ ವಿವರಿಸಲಾಗಿದೆ. ಸಭೆ ಸಮಾರಂಭಗಳಿಗೆ ಸಭಾಂಗಣವನ್ನು ಒದಗಿಸುವವರೂ ಈ ಕಾನೂನಿನ ಪರಿಮಿತಿಗೆ ಬರುತ್ತಾರೆ. ವಿವಿಧ ತಪ್ಪುಗಳಿಗೆ ಐದು ಲಕ್ಷ ರೂಪಾಯಿಗಳ ತನಕ ದಂಡ ಹಾಗೂ ಆರು ತಿಂಗಳ ಜೈಲುವಾಸ ಶಿಕ್ಷೆಯ ಪ್ರಸ್ತಾವವೂ ಇದರಲ್ಲಿದೆ. ಆದುದರಿಂದ ಈ ಕಾನೂನನ್ನು ಸರಿಯಾಗಿ ಅಧ್ಯಯನ ಮಾಡಿ ಅದರ ಶಿಫಾರಾಸುಗಳನ್ನು ನಮ್ಮ ಸಭಾಂಗಣದಲ್ಲಿ ಅಳವಡಿಸುವುದಾದಲ್ಲಿ ಆಡಳಿತಮಂಡಳಿಗೆ ವರದಿಯೊಂದನ್ನು ನೀಡಲು ಸಮಿತಿಯೊಂದನ್ನು ನೇಮಕ ಮಾಡಲಾಗಿದೆ. ಈ ಸಮಿತಿಯು ಆಹಾರದ ಸುರಕ್ಷತೆ, ಕಾನೂನು ಅಭಿಪ್ರಾಯ, ಖರ್ಚುವೆಚ್ಚಗಳು ಹಾಗೂ ಅನುಷ್ಠಾನವೂ ಸೇರಿದಂತೆ ಎಲ್ಲಾ ಆಯಾಮಗಳನ್ನು ಅಧ್ಯಯನ ಮಾಡಿ ಅಳವಡಿಸಬೇಕಾದಂತಹ ಮಾರ್ಪಾಡುಗಳ ರೂಪುರೇಶೆಗಳನ್ನು ತನ್ನ ವರದಿಯಲ್ಲಿ ನೀಡಲಿದೆ. ಈ ವರದಿಯು ಶ್ರೀ ಶಾರದಾ ಮಂಟಪಕ್ಕೆ ಮಾತ್ರವಲ್ಲ ಇತರ ಸಭಾಂಗಣಗಳಿಗೂ ಮಾದರಿಯಾಗಲಿ ಹಾಗೂ ಶ್ರೀ ಶಾರದಾಮಂಟಪವು ಇತರರಿಗೆ ಆದರ್ಶಪ್ರಾಯವಾಗಿಯೇ ಮುಂದುವರಿಯಲಿ ಎಂದು ಹಾರೈಸುತ್ತೇವೆ.












# ಗುರುಪುರದ ಗುರುಗಳು (ನೆನಪಿನಂಗಳದಿಂದ)

**ಲೇಖಕ : ಜಿ.ಕೆ ಕೋಲ್ಪೆ**

ಮೊದಲ ಗುರು ತಾಯಿಯಾದರೆ, ಜ್ಞಾನ ಜ್ಯೋತಿ ಬೆಳಗಿಸಿದ ಗುರುಪುರ ವಿದ್ಯಾದೇಗುಲ ಮೊದಲ ಶಾಲೆ. ನನ್ನ ದೊಡ್ಡಮ್ಮನವರೇ ಆದ ಗಿರಿಜಾ ಬ್ಯಾ ಟೀಚರ್-ಒಂದನೇ ಇಯತ್ತೆಯಲ್ಲಿ ಮೊದಲ ಗುರುವಾಗಿದ್ದರು. ಗುರುವರೇಣ್ಯರುಗಳಾದ ಗಣಪ-ಮಾಧವ-ರಮಾನಂದರು ಮುಂದಿನ ಮೂರು ತರಗತಿಗಳಲ್ಲಿ ಕಲಿಸಿದರು. ಆಂಗ್ಲಭಾಷೆಗೆ (ಐದನೇ ತರಗತಿಗೆ) ಮೇಡಂ ಸಿಸಿಲಿಯಾರವರಾದರೆ, ದೇವಕಿ-ಶಾರದೆ ಟೀಚರ್‌ಗಳು ಚರಿತ್ರೆ-ಭೂಗೋಳಕ್ಕೆ. ಪರಮೇಶ್ವರ ಮಾಸ್ತರರ ಗಣಿತ ಸರಳ ವಾಗಿದ್ದರೆ, ವಿಠಲ ಮಾಸ್ತರರ ಲೆಕ್ಕ ಕಬ್ಬಿಣದ ಕಡಲೇ ಕ್ಯಾಯಂತಿತ್ತು. ಮಂದಾರ ಕೇಶವ ಭಟ್ಟರ (ಇವರು ಮುಂದಿನ ದಿನಗಳಲ್ಲಿ "ಮಂದಾರ ರಾಮಾಯಣ" ಎಂಬ ಕೃತಿಯನ್ನು ಸೃಷ್ಟಿಸಿದವರು) ಕನ್ನಡ ಪಾಠ ನನಗೆ ಅಚ್ಚುಮೆಚ್ಚಾಗಿದ್ದರೆ, ಗೋಪಾಲ ಮಾಸ್ತರರ ಆಟೋಟ ಬಲು ಆನಂದ. ಆಡಳಿತ ಮಂಡಳಿ ಅಧ್ಯಕ್ಷ ವಾಸುದೇವ ಮಾಸ್ತರರು ಈ ಶಾಲೆಗೆ ಕಮಾಂಡರ್ ಇದ್ದಂತಿದ್ದರು. ಮಿಲಿಟರಿ ರಾಮರಾಯರು-ಮುಖ್ಯೋಪಾಧ್ಯಾಯರು. ನನ್ನ ಜ್ಞಾನಜ್ಯೋತಿ ಬೆಳಗಿಸಿದ ಇವರೆಲ್ಲರಿಗೆ ನೆನಪಿನಂಗಳದ ಮೂಲಕ ಶ್ರದ್ಧಾಂಜಲಿ ಸಮರ್ಪಿಸುತ್ತಿದ್ದೇನೆ. ಇವರೆಲ್ಲಾ ಭಗವತ್ ಸಾಯುಜ್ಯದಲ್ಲಿ ಬೆಳಗುತ್ತಿದ್ದಾರೆ. ಇಸವಿ 1946 ರಿಂದ 1953 ರ ತನಕ ಕಳೆದ ಬಾಲ್ಯದ ವಿದ್ಯಾಭ್ಯಾಸದ ಆ ದಿನಗಳನ್ನು ಹೇಗೆ ಮರೆಯಲಿ? ಬಾಲ್ಯ ಸ್ನೇಹಿತ ಪೊಳಲಿಯ ಅ.ಬಾಲಕೃಷ್ಣ ಶೆಟ್ಟಿ (ತುಳು ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿದ್ದರು.) ಈಗ ನಮ್ಮೊಂದಿಗಿಲ್ಲ. ನಮ್ಮಿಬ್ಬರ "ಚಿತ್ರ-ಕಥೆ-ಸಂಕಲನ" ಚಂದ ಮಾಮ-ಬಾಲಮಿತ್ರಗಳ ಪ್ರೇರಣೆಯಿಂದ 'ಹಸ್ತ ಪತ್ರಿಕೆ' ರೂಪದಲ್ಲಿ ನೋಡಿ ಓದಿದ ಕನ್ನಡ ಗುರುಗಳು ಮೆಚ್ಚಿ ಶಹಬ್ಬಾಸ್‌ಗಿರಿ ಕೊಟ್ಟದ್ದು ಮರೆಯಲಸಾಧ್ಯ. ನನ್ನಂತೆ ಬ್ಯಾಂಕ್ ಉದ್ಯೋಗಿಯಾಗಿದ್ದ ಈ ಆಪ್ತಮಿತ್ರನೂ ನನ್ನನ್ನು ಅಗಲಿ ಕೆಲವು ವರ್ಷಗಳೇ ಸಂದಿವೆ.

ಹೆಚ್ಚಿನ ವಿದ್ಯಾರ್ಥಿಗಳಿಗೆ ಇಷ್ಟವಿಲ್ಲದ ಕಷ್ಟ ಎನಿಸುವ ಗಣಿತದ ವಿಠಲ ಮಾಸ್ತರು ಚಾಕ್‌ಪೀಸ್-ಡಸ್ಟರ್‌ನಿಂದ ತಲೆಗೆ ಕುಕ್ಕುತ್ತಾ (ಕುಟ್ಟಿಬಾರಿಸುತ್ತಾ) ನಾನಾ ರೀತಿಯ ಶಿಕ್ಷೆ ವಿಧಿಸಿ ಕಲಿಸಿದ ಲೆಕ್ಕಗಳು ನನ್ನ ತಲೆಗೆ ಕಡೆಗೂ ಹತ್ತಲಾರದೆ ಅವರನ್ನು ಕಂಡೊಡನೆ ಕಂಗಾಲಾಗಿ ಹೋಗುತ್ತಿದ್ದೆ. ಶಿಸ್ತಿನ ಮುಖ್ಯೋಪಾಧ್ಯಾಯರಾದ ರಾಮರಾಯ ಗುರುಗಳ ನಾಗರ ಬೆತ್ತದ ಏಟಿನ ರುಚಿ ತುಂಟ ಹುಡುಗರು ಮರೆಯುವಂತಿಲ್ಲ. ನಾನೂ ಇದಕ್ಕೆ ಹೊರತಲ್ಲ. ಹಾಗೆಂದು ಏಳನೇ ಇಯತ್ತೆ ನಂತರ ಬೇರೆಕಡೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸುವ ಸಂದರ್ಭದಲ್ಲಿ, ಅವರ ಕೈಯಿಂದ ಟಿ.ಸಿ ಪಡೆದು, ಕಾಲಿಗೆ ಅಡ್ಡಬಿದ್ದು ಕಣ್ಣೀರಿಟ್ಟು ಹೊರಟಾಗ, ಅವರ ಹಿತನುಡಿ ಹಾರೈಕೆ ಗಳಿಂದ ಮುಂದಿನ ಜೀವನದಲ್ಲಿ ಸಾಕಷ್ಟು ಸಾಧಿಸಿದ್ದೂ ಇದೆ. ಶಾಲಾ ವಾರ್ಷಿಕೋತ್ಸವದ ನಾಟಕಕ್ಕೆ ತರಬೇತಿ ಕೊಡುತ್ತಿದ್ದ ರಾಮ ಮಾಸ್ತರ್, ನನ್ನ ಮುಂದಿನ ದಿನಗಳಲ್ಲಿ ನಾಟಕ-ಯಕ್ಷಗಾನ ಅಭಿಯನಕ್ಕೆ ಸ್ಪೂರ್ತಿಯಾಗಿದ್ದರು. ದೈಹಿಕ ಶಿಕ್ಷಕರಾಗಿದ್ದ ಗೋಪಾಲ ಮಾಸ್ತರ್‌ರವರು ನಿವೃತ್ತಿಯ ನಂತರ ಪೊಳಲಿ ದೇವಸ್ಥಾನದ ಗೋಪುರದಲ್ಲಿ-ಜೀವನಾಧಾರವಾಗಿ ಹಸ್ತ ಸಾಮುದ್ರಿಕೆ-ಜಾತಕ ಭವಿಷ್ಯ ನಡೆಸುತ್ತಿರುವುದನ್ನು ಕಂಡು ಮನನೊಂದು, ಅವರನ್ನು ಆಗ ನಾನು ನೆಲೆನಿಂತ ಊರಿಗೆ ಬರಮಾಡಿಕೊಂಡು, ನನ್ನ ಸ್ನೇಹಿತ-ಬಂಧುಗಳಿಗೆ ಪರಿಚಯಿಸಿ, ಅವರ ಸಂಪಾದನೆಗೆ ಸಹಕರಿಸಿ ಎರಡು-ಮೂರು ದಿನ ಸತ್ಕಾರ ಮಾಡಿ, ಕಿಂಚಿತ್ ಗುರುಕಾಣಿಕೆ ಕೊಟ್ಟು ಕಳಿಸಿಕೊಟ್ಟದ್ದು ನನ್ನನ್ನು ಧನ್ಯನಾಗಿಸಿದೆ. ಅವರು ರಾ.ಸ್ವ.ಸೇ. ಸಂಘದ ಶಿಸ್ತಿನ ಸಿಪಾಯಿಯಾಗಿದ್ದರು. ನನ್ನ ಹುಟ್ಟೂರಿಂದ ಸುಮಾರು 60 ಕಿ.ಮೀ ದೂರದಲ್ಲಿ ತಾಯಿಯ ಅಕ್ಕ ಟೀಚರ್ ಗಿರಿಜಾ ಬ್ಯಾಯವರ ಮುತುವರ್ಜಿಯಿಂದ ಬಾಲ್ಯದ ವಿದ್ಯಾಭ್ಯಾಸ ಲಭ್ಯವಾಗಿದ್ದು, ನಾನು ಮೂಲಮನೆಯಲ್ಲೇ ಇರುತ್ತಿದ್ದರೆ ಬಹುಷಃ ತೋಟದಲ್ಲಿ ಕೃಷಿಗೆ ಸಹಕರಿಸುತ್ತಾ ಹಟ್ಟಿ ಕೆಲಸ-ದೇವರ ಪೂಜಾದಿಗಳಿಗೆ ಸೀಮಿತವಾಗುತ್ತಿತ್ತೇನೋ. ಬಾಲ್ಯದಲ್ಲೇ ಬಂಧು-ಬಳಗ ಬಿಟ್ಟು ಮನೆಯಿಂದ ದೂರವಿದ್ದು ಮಾನಸಿಕ ಹಿಂಸೆ ಅನುಭವಿಸಿದ್ದರೂ, ಮುಂದಿನ ಭವಿಷ್ಯ ರೂಪಿಸಿದ ಮಾತಾ-ಪಿತೃಗಳ, "ಗುರುಪುರದ ಗುರುಗಳ" ಆಶೀರ್ವಾದದಿಂದ "ನನ್ನ ಬಾಳು ಬೆಳಗಿತು" ಎಂಬುದರಲ್ಲಿ ಅನುಮಾನವಿಲ್ಲ. ಅದು ಆಗಿನ ಕಾಲದ ಪರಿಸ್ಥಿತಿ. ಈಗಿನ ವಿದ್ಯಾಭ್ಯಾಸ, ಗುರುಶಿಷ್ಯ ಸಂಬಂಧ ಹಾಗೂ ಕುಟುಂಬದಲ್ಲಿ ಹೊಂದಾಣಿಕೆ ಹೇಗಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಅಂದಿಗೆ ಅದೇ ಸುಖ-ಇಂದಿಗೆ ಇದೇ ಸುಖವೆಂದು ಸಮಾಧಾನ ಪಡೆದುಕೊಳ್ಳುವುದು ಬಿಟ್ಟು ನಾವು ಬೇರೇನು ಮಾಡಲು ಸಾಧ್ಯ?

## ಜಂಗಮ ಗಂಟೆ

ಯುವ ಜನರಿಗೆ ಬೆಳಿಗ್ಗೆಯಿಂದ ರಾತ್ರಿಯವರೆಗೆ,
ಅಗತ್ಯವಾಗಿ ಬೇಕಾದ ಒಡನಾಡಿ!..................
ಸಂಪರ್ಕ, ಸಂಕ್ಷಿಪ್ತ ಸುದ್ದಿ ಸೇವೆ, ಮಿಂಚಂಚೆಗಳಿಗೆ,
ಇದುವೇ..........................ಜೀವನಾಡಿ.....

ಜನ ಹಣಕೊಟ್ಟು ಮಾತನಾಡುವ ಯಂತ್ರ,
ಫೋಟೊಗ್ರಾಫಿ, ವೀಡಿಯೋಗ್ರಾಫಿ, ಸಾಮಾಜಿಕ ಜಾಲತಾಣಗಳಿಗೆ,
ಇದುವೇ...............ತಾರಕ ಮಂತ್ರ!!...........

ಇದು ಉಂಟು ಮಾಡುವ ವೈಯಕ್ತಿಕ, ಕೌಟುಂಬಿಕ,
ಸಾಮಾಜಿಕ ತಲ್ಲಣಗಳು, ಅನಾಹುತಗಳು ಹತ್ತು ಹಲವು
ಇದರಿಂದಾಗಿ ಸಾಮಾಜಿಕ ಸಂಬಂಧಗಳಿಗೆ,
ಉಂಟಾಗುವ ಅವಾಂತರ, ಧಕ್ಕೆ........................ಕೆಲವು

ಯಾವ ಪುಣ್ಯಾತ್ಮ ತಂತ್ರಜ್ಞಾನ ವೇಷದಲ್ಲಿ ಕಂಡುಹಿಡಿದನೊ
ಈ ಅಂಗೈಯಗಲದ ಪುಟ್ಟ ಪೆಟ್ಟಿಗೆಯನ್ನು.................?
ಯಾವುದಿದು ಇಷ್ಟೆಲ್ಲ ಅನುಕೂಲ, ಅನಾನುಕೂಲಗಳನ್ನು,
ಮಾನವಕುಲಕ್ಕೆ ನೀಡಿದ ಸಲಕರಣೆ, ಸಾಧನ..............

ಇನ್ಯಾವುದು..............? ಅದುವೇ ಮೊಬೈಲ್

**- ಮಲ್ಲಿಕ್ ಉಳಿಯಾರು**

# ಎರ್ಮಾಳು ವಾಸುದೇವ ರಾವ್ ಮತ್ತು ಸಾಂತೂರು ಸದಾಶಿವ ರಾವ್ ಇವರಿಗೆ ಗೌರವಾರ್ಪಣೆ

**-ವೈ ಮೋಹನ್ ರಾವ್**

ಹಿರಿಯರಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದವನ್ನು ಪಡೆಯುವ 'ಹಿರಿಯರಿಗೆ ಗೌರವಾರ್ಪಣೆ' ಎಂಬ ಕಾರ್ಯಕ್ರಮವನ್ನು ಕಳೆದ 5 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದೇವೆ. ವಾಡಿಕೆಯಂತೆ ಜನವರಿ 26, 2019ರಂದು ಈ ವರ್ಷದ ಕಾರ್ಯಕ್ರಮ ನಡೆಯಬೇಕಿತ್ತು. ಆದರೆ ಕಾರಣಾಂತರದಿಂದ ಒಂದು ವಾರ ಮೊದಲೇ ಈ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದೆವು.

ಎರ್ಮಾಳು ವಾಸುದೇವ ರಾವ್ ಮತ್ತು ಸಾಂತೂರು ಸದಾಶಿವ ರಾವ್ ಇವರಿಬ್ಬರನ್ನು ಗೌರವಿಸಿ ಆಶೀರ್ವಾದವನ್ನು ಪಡೆಯುವುದು ಎಂದು ನಿರ್ಧರಿಸಿದೆವು. ಆ ದಿನ ಮೊದಲು ಎರ್ಮಾಳಿನಲ್ಲಿರುವ ಎರ್ಮಾಳು ವಾಸುದೇವ ರಾವ್ ಇವರ ಮನೆಗೆ ಐದು ಘಂಟೆಗೆ ತಲುಪಿದೆವು. ಎರ್ಮಾಳು ವಾಸುದೇವ ರಾವ್ ಮತ್ತು ಅವರ ಸಹೋದರ ಎರ್ಮಾಳು ಸದಾಶಿವ ರಾವ್ ಇವರ ಮಗಳು ಶ್ರೀಮತಿ ರೂಪ ಹೊಳ್ಳ ಇವರೊಡನೆ ಕ್ಷೇಮ ಸಮಾಚಾರವನ್ನು ವಿನಿಮಯ ಮಾಡಿಕೊಂಡೆವು.

ಮೊದಲು ನಂದಳಿಕೆ ಪ್ರವೀಣ್ ಕುಮಾರ್ ಗಣೇಶ ಸ್ತುತಿಯೊಂದಿಗೆ ಎರ್ಮಾಳು ವಾಸುದೇವ ರಾವ್ ಬರೆದ ಕೃತಿಯ 'ಶ್ರೀ ಸತ್ಯನಾರಾಯಣ' ಪ್ರಸಂಗದ ಮೊದಲ ಪದ್ಯ "ವಂದಿಸುತ ದೇವನಿಗೆ ಗುರುವಿಗೆ, ತಂದೆ ತಾಯ್ಗಳ ನಮಿಸಿ..." ವನ್ನು ತಮ್ಮ ಕಂಚಿನ ಕಂಠದಲ್ಲಿ ಸೊಗಸಾಗಿ ಹಾಡಿದರು.

ನಂತರ ಎರ್ಮಾಳು ವಾಸುದೇವ ರಾವ್ ಇವರನ್ನು ವೈ. ಮೋಹನ ರಾವ್ ಸಭೆಗೆ ಪರಿಚಯಿಸಿದರು. 'ಎರ್ಮಾಳು ವಾಸುದೇವ ರಾವ್ ವೃತ್ತಿಯಲ್ಲಿ ಶಿಕ್ಷಕರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿ ಈಗ ನಿವೃತ್ತಿಯಾಗಿ ಸುಮಾರು 31 ವರ್ಷ ಆಯಿತು. ಈಗ ಅವರಿಗೆ 89 ವರ್ಷಗಳು. ಅವರು ಶಿಕ್ಷಕರಾಗಿದ್ದಾಗಲೂ ಮತ್ತು ನಿವೃತ್ತಿಯಾದ ನಂತರವೂ ತೆಂಕುತಿಟ್ಟು ಯಕ್ಷಗಾನ ಕಲೆಯನ್ನು ಅರಳಿಸುತ್ತಾ ಬಂದರು. ತೆಂಕುತಿಟ್ಟಿನ ಯಕ್ಷಗಾನದ ಗುರುಗಳಾಗಿ ಭಾಗವತಿಕೆ, ಮದ್ದಳೆ, ಚೆಂಡೆ, ಅಭಿನಯ, ನೃತ್ಯ, ಅರ್ಥ ಹೇಳುವುದು - ಹೀಗೆ ಎಲ್ಲಾ ಪ್ರಾಕಾರಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಬಲ್ಲ ಸಮರ್ಥರು. ಬಡಗುತಿಟ್ಟಿನ ಯಕ್ಷಗಾನ ಮದ್ದಳೆ ವಾದಕರೂ ಹೌದು. ಯಕ್ಷಗಾನ ಮತ್ತು ನಾಟಕಗಳಲ್ಲಿ ವರ್ಣಾಲಂಕಾರ, ಬಣ್ಣ ಹಚ್ಚುವುದು ಮೊದಲಾದ ಸೇವೆಗಳನ್ನು ಮಾಡುತ್ತಿದ್ದಾರೆ. ಹರಿಕಥೆ, ನಾಟಕ, ಭಜನೆಗಳಿಗೆ ತಬಲಾ ವಾದಕರಾಗಿದ್ದಾರೆ' ಎಂದು ವೈ. ಮೋಹನ ರಾವ್ ನುಡಿದರು.

ಎಂ. ಪಾಲಚಂದ್ರ ರಾಯರು ಎರ್ಮಾಳು ವಾಸುದೇವ ರಾವ್ ಇವರ ಗುಣವಿಶೇಷಗಳನ್ನು ವಿವರಿಸಿದರು. ಇವರ ಕಲಾ ಸೇವೆ ಅಮೂಲ್ಯವಾದದ್ದು. ಇವರ ಆಶೀರ್ವಾದ ನಮಗೆ ಮಾತ್ರವಲ್ಲ, ಇತರರಿಗೂ ಹಾಗೂ ದೇಶದ ಎಲ್ಲರಿಗೂ ದೊರೆಯುವಂತಾಗಲಿ ಎಂದು ಶುಭ ಹಾರೈಸಿದರು.

ಬಳಿಕ ಎರ್ಮಾಳು ವಾಸುದೇವ ರಾವ್ ಇವರ ತಲೆಗೆ 'ಪೇಟಾ' ಇಟ್ಟು, ಮಲ್ಲಿಗೆ ಹೂ ಹಾರವನ್ನು ಹಾಕಿ, ಶಾಲು ಹೊದಿಸಿ, ಫಲಪುಷ್ಪಗಳನ್ನಿತ್ತು ದೇವರ ಮೂರ್ತಿಯನ್ನು ಕಾಣಿಕೆಯಾಗಿ ನೀಡಿ ಸನ್ಮಾನಿಸಿದೆವು. ಎಲ್ಲರೂ ಅವರಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದೆವು.

ಸನ್ಮಾನವನ್ನು ಸ್ವೀಕರಿಸಿ ಎರ್ಮಾಳು ವಾಸುದೇವ ರಾವ್ ಅವರು ನುಡಿದರು- "ಯಕ್ಷಗಾನ ತರಬೇತಿಯನ್ನು ಹವ್ಯಾಸಿ ಯಕ್ಷಗಾನ ಕಲಾವಿದರಿಗೆ ಮಾತ್ರ ನೀಡುತ್ತಿದ್ದೇನೆ. ಏನೋ ದೇವರ ದಯೆ. ನೀವೆಲ್ಲರೂ ಮನೆಗೆ ಬಂದು ನನ್ನನ್ನು ಪ್ರೋತ್ಸಾಹಿಸಿದ್ದೀರಿ. ಕೃತಜ್ಞತೆಗಳು"

ಆತಿಥ್ಯವನ್ನಿತ್ತು ಸತ್ಕರಿಸಿದ ಎರ್ಮಾಳು ವಾಸುದೇವ ರಾಯರ ಕುಟುಂಬದವರಿಗೆ ಕೃತಜ್ಞತೆ ಸಲ್ಲಿಸಿ ಅಲ್ಲಿಂದ ನಾವು ಸಾಂತೂರು ಸದಾಶಿವ ರಾಯರ ಮನೆಗೆ ಹೊರಟೆವು.

ಸಾಂತೂರು ಸದಾಶಿವರಾವ್ ಮತ್ತು ಅವರ ಮನೆಯವರು ನಮ್ಮನ್ನು ಸ್ವಾಗತಿಸಿದರು. ವೈ, ಮೋಹನರಾವ್ ಇವರು ಸಾಂತೂರು ಸದಾಶಿವರಾವ್ ಅವರನ್ನು ಪರಿಚಯಿಸಿ ಅವರ ಬಗ್ಗೆ ಮಾತನಾಡಿದರು- 'ಇವರು ಕಷ್ಟ ಜೀವಿಗಳು. ಕೃಷಿಕರು. ಅಧ್ಯಾಪಕ ವೃತ್ತಿಯಲ್ಲಿ ಭಡ್ತಿ ಪಡೆಯುತ್ತಾ ಪಲಿಮಾರು ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾದರು. ಖಾಸಗಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡರು. ಸಂಸ್ಕೃತ ಮತ್ತು ವೇದಾಧ್ಯಯನ ಮಾಡಿದರು. ಧಾರ್ಮಿಕ ವಿಷಯಗಳಲ್ಲಿ ಪ್ರವಚನ ಮಾಡುತ್ತಿದ್ದರು. ಯಕ್ಷಗಾನ ತಾಳ ಮದ್ದಳೆಯಲ್ಲಿ ಅರ್ಥ ಹೇಳುವವರಾಗಿ ಹೆಸರುಗಳಿಸಿದ್ದರು. ಅವರ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಅವರು ಈಗಲೂ ಯಕ್ಷಗಾನ ತರಬೇತಿ ನೀಡುತ್ತಾ ಇದ್ದಾರೆ. ಜೀವೇಮ ಶರದಶ್ಯತಂ. ಆದರೆ ಹೇಗೆ ಬದುಕಬೇಕು. ನಂದಾಮ ಶರದಶ್ಯತಂ, ಮೋದಾಮ ಶರದಶ್ಯತಂ, ಭವಾಮ ಶರದಶ್ಯತಂ, ಶೃಣವಾಮ ಶರದಶ್ಯತಂ, ಪ್ರಬ್ರವಾಮ ಶರದಶ್ಯತಂ, ಜೀತಾಶ್ಯಾಮ ಶರದಶ್ಯತಂ'

ಎಂ. ಪಾಲಚಂದ್ರ ರಾಯರು ಸಾಂತೂರು ಸದಾಶಿವ ರಾವ್ ಇವರ ಬಗ್ಗೆ ಮಾತನಾಡಿದರು. ಇವರ ಧಾರ್ಮಿಕ ಚಿಂತನೆಗಳು, ಪ್ರವಚನಗಳು, ಯಕ್ಷಗಾನದ ಬಗ್ಗೆ ಇದ್ದ ಅತೀವ ಒಲವು, ನಿರಾಡಂಬರ ವ್ಯಕ್ತಿತ್ವ, ಸರಳ ಸಜ್ಜನ ಜೀವನ ಶೈಲಿ, ಅವರ ಬಾಂಧವ್ಯ ಕುರಿತು ವಿವರಿಸಿದರು.

ಬಳಿಕ ಸಾಂತೂರು ಸದಾಶಿವ ರಾವ್ ಇವರ ತಲೆಗೆ 'ಪೇಟಾ' ಇಟ್ಟು, ಮಲ್ಲಿಗೆ ಹೂ ಹಾರವನ್ನು ಹಾಕಿ, ಶಾಲು ಹೊದಿಸಿ, ಫಲಪುಷ್ಪಗಳನ್ನಿತ್ತು ದೇವರ ಮೂರ್ತಿಯನ್ನು ಪ್ರೀತಿಯ ಕಾಣಿಕೆಯಾಗಿ ನೀಡಿ ಗೌರವಿಸಿ ಸನ್ಮಾನಿಸಿದೆವು. ಎಲ್ಲರೂ ಅವರಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದೆವು.

ಸನ್ಮಾನವನ್ನು ಸ್ವೀಕರಿಸಿ ಸಾಂತೂರು ಸದಾಶಿವ ರಾವ್ ಇವರು ನುಡಿದರು- 'ಗೌರವವನ್ನು ನಾನು ಸಂತೋಷದಿಂದ ಸ್ವೀಕರಿಸಿದ್ದೇನೆ. ಸನ್ಮಾನ ವ್ಯಾವಹಾರಿಕವಾದದ್ದು. ನಾನು ಸೇವೆಯನ್ನು ಮಾಡಿದ್ದೇನೆ. ಯಾವ ವ್ಯಕ್ತಿಯೂ ತನ್ನ ಕೆಲಸಕ್ಕೆ ಚ್ಯುತಿ ಮಾಡಬಾರದು. ನೀವೆಲ್ಲಾ ಇಲ್ಲಿಗೆ ಬಂದು ಬಹಳ ಪ್ರೀತಿಯಿಂದ, ವಿಶ್ವಾಸದಿಂದ ನನ್ನನ್ನು ಕಂಡಿದ್ದೀರಿ. ಸರ್ವೇ ಜನಾಃ ಸುಖಿ ನೋ ಭವಂತು. ನಿಮಗೆ ಕೃತಜ್ಞತೆಗಳು'

ನಾವೇ ಧನ್ಯರು ಎಂದೆನ್ನುತ್ತಾ ಸಾಂತೂರು ಸದಾಶಿವ ರಾವ್ ಅವರ ಕುಟುಂಬದವರಿಗೆ ಕೃತಜ್ಞತೆ ಸಲ್ಲಿಸುತ್ತಾ ನಾವು ಅಲ್ಲಿಂದ ನಮ್ಮ ಮನೆಗೆ ತಲುಪಿದೆವು.


'ಸಮಾಜದ ಹಿರಿಯರಿಗೆ ಗೌರವಾರ್ಪಣೆ' ಕಾರ್ಯಕ್ರಮದ ನೇತೃತ್ವವನ್ನು ವಸಂತ ರಾವ್ ಕರಂಬಳ್ಳಿಯವರು ವಹಿಸಿದ್ದರು. ಸಮಾಜದ ಚಟುಚಟಿಕೆಗಳಲ್ಲಿ ಸದಾ ಸಕ್ರಿಯರಾಗಿದ್ದ ಹೆರ್ಗ ನಿರಂಜನ ರಾವ್ ಇತ್ತೀಚೆಗೆ ನಮ್ಮನ್ನು ಅಗಲಿದ್ದರು. ಆದ್ದರಿಂದ ಈ ಕಾರ್ಯಕ್ರಮವನ್ನು ಅವರ ಸ್ಮರಣಾರ್ಥವಾಗಿ ನೆರವೇರಿಸಿದೆವು.

ಎಂ. ಪಾಲಚಂದ್ರ ರಾವ್, ವಸಂತ ರಾವ್ ಕರಂಬಳ್ಳಿ, ಎನ್. ಉದಯಚಂದ್ರ ರಾವ್, ಎನ್. ಶಶಾಂಕ ರಾವ್, ಎನ್. ಉಮೇಶ ರಾವ್, ಎನ್. ಪ್ರವೀಣ ಕುಮಾರ್, ಬಿ.ದಿನೇಶ್, ಕರಂಬಳ್ಳಿ ವಿಕೇಶ್ ರಾವ್, ಕೃಷ್ಣಾನಂದ ರಾವ್ ಉಂಡಾರು, ಬಿ.ಎಸ್. ರಾವ್, ಬೆಳ್ಮಣ್ ಸುರೇಶ ರಾವ್, ಧರ್ಮೇಂದ್ರ ರಾವ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕರಿಸಿದರು. ಇವರೆಲ್ಲರಿಗೂ ಅನಂತ ಕೃತಜ್ಞತೆಗಳು.

## ಕಾಂತಮಂಗಲದಲ್ಲಿ ಕಿರುಷಷ್ಠಿ

ತಾ 12-01-2019ರಂದು ಸುಳ್ಯ ಕಾಂತಮಂಗಲ ಶ್ರೀ ಸುಬ್ರಹ್ಮಣ್ಯ ಸನ್ನಿಧಿಯಲ್ಲಿ ಕಿರುಷಷ್ಠಿ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ಸಂಪನ್ನಗೊಂಡವು ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರಗಿದವು. ತದನಂತರ ಧಾರ್ಮಿಕ ಸಭೆ ಜರಗಿತು

## ಕೂಡ್ಲು ವಿಷ್ಣುಮಂಗಲ ದೇವಸ್ಥಾನದಲ್ಲಿ ಮಕರ ಸಂಕ್ರಾಂತಿ ಉತ್ಸವ



## ಬಳ್ಪದಲ್ಲಿ ಜಾತ್ರೆ

ತಾ.29.12.2018ರಿಂದ 02.01.2019ರ ವರೆಗೆ ಸುಳ್ಯ ಬಳ್ಪದ ಶ್ರೀ ತ್ರಿಶೂಲಿನಿ ಹಾಗೂ ಶ್ರೀ ದುರ್ಗಾಪರಮೇಶ್ವರೀ ದೇವರ ಸನ್ನಿಧಾನದಲ್ಲಿ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ಜರಗಿತು. ಸುಮಾರು 6000 ಜನ ಭಕ್ತರು ಭಾಗವಹಿಸಿದರು. ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ವೈದಿಕ ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದರು. ಪಡುಬಿದ್ರೆಯ ಶ್ರೀ ಜಗದಾಭಿರಾಮ ರವರು ಬಲಿಸೇವೆಯನ್ನು ನಿರ್ವಹಿಸಿದರು. ಅನುವಂಶಿಕ ಮೊಕ್ತೇಸರರಾದ ಶ್ರೀವತ್ಸ ಇವರು ಕಾರ್ಯಕ್ರಮದ ಮೇಲುಸ್ತುವಾರಿ ಯನ್ನು ನಿರ್ವಹಿಸಿದರು.

## ಶ್ರೀ ಕೂಡಬೆಟ್ಟು ಸದಾಶಿವ ದೇವಸ್ಥಾನ, ಬೆಳ್ತಂಗಡಿ

ಆತ್ಮೀಯರೇ, ತಾ.08-01-2019

ತಾರೀಕು 04-03-2019ನೇ ಸೋಮವಾರದಂದು

**ಮಹಾಶಿವರಾತ್ರಿ** ಹಾಗೂ

ತಾರೀಕು 26-03-2019ನೇ ಮಂಗಳವಾರದಂದು ಶ್ರೀ ದೇವರ

**ಪ್ರತಿಷ್ಠಾ ವರ್ಧಂತಿ**

ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಳ್ಳಲಿದೆ.

ಆ ಪ್ರಯುಕ್ತ ನಡೆಯುವ ಎರಡೂ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಭಾಗವಹಿಸಿ, ಸಹಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಹೆಚ್. ವಾಸುದೇವ ರಾವ್, ಕುಕ್ಕಾವು**
ಅಧ್ಯಕ್ಷರು, ಶಿವರಾತ್ರಿ ಉತ್ಸವ ಸಮಿತಿ,
ಕೂಡಬೆಟ್ಟು
ಮೊ : 7338448432

**ಬಿ.ಕೆ. ಧನಂಜಯ ರಾವ್** , ವಕೀಲರು,
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ
ಶ್ರೀ ಸದಾಶಿವ ದೇವಸ್ಥಾನ, ಕೂಡಬೆಟ್ಟು
ಮೊ : 9480055581

॥ ಶ್ರೀ ಸುಬ್ರಹ್ಮಣ್ಯಃ ಪ್ರಸೀದತು ॥

ಆತ್ಮೀಯ ಭಗವದ್ಭಕ್ತರೇ, ಕಾಂತಮಂಗಲ, ದಿನಾಂಕ : 18-01-2019

**ದಿನಾಂಕ 18-02-2019 ಸೋಮವಾರ**

**ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

**ಕಾಂತಮಂಗಲ ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾದಿನೋತ್ಸವವು**

ಸಂಪನ್ನಗೊಳ್ಳಲಿರುವುದು.

ಆ ಪ್ರಯುಕ್ತ ನೆರವೇರಲಿರುವ ಎಲ್ಲಾ ದೇವತಾಕಾರ್ಯಕ್ರಮಗಳಿಗೆ ಆಗಮಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ಸುಬ್ರಹ್ಮಣ್ಯ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

-ಶ್ರೀ **ಎ. ಶಿವರಾವ್ ಬಯಂಬು**, ಅನುವಂಶಿಕ ಆಡಳಿತ ಮೊಕ್ತೇಸರರು




**ಎಮ್. ದೇವಾನಂದ್ ಭಟ್** Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

**ಬೆಳ್ವಾಯಿ-574213** (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - **574 164** (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Ph : 98459 92859

Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.


## ಸ್ಮಾರಕ ವಿಶೇಷ ದತ್ತಿ ಉಪನ್ಯಾಸ



ಇತ್ತೀಚೆಗೆ ಮೂಡಬಿದ್ರಿ ಧವಳಾ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಬ್ರಹ್ಮಾವರದ ನಿವೃತ್ತ ಪ್ರಾಂಶುಪಾಲರಾದ ಡಾ। ವೈ. ರವೀಂದ್ರನಾಥ ರಾವ್ ಅವರು "ಸಮಾಜ ವಿಜ್ಞಾನಗಳ ಪ್ರಸ್ತುತತೆ, ಸವಾಲುಗಳು ಮತ್ತು ಅವಕಾಶಗಳು" ಎಂಬ ವಿಷಯದ ಕುರಿತು ಡಾ। ಟಿ.ಕೆ.ವಿ.ಭಟ್ ಸ್ಮಾರಕ ವಿಶೇಷ ದತ್ತಿ ಉಪನ್ಯಾಸ ನೀಡಿದರು. ದೇಶದ ಸಮಾಜ ವಿಜ್ಞಾನಿಯೋರ್ವರನ್ನು ಆಹ್ವಾನಿಸಿ, ವಿಶ್ವವಿದ್ಯಾನಿಲಯ ಅಥವಾ ಅದರ ಸಂಯೋಜನೆಗೊಳಪಟ್ಟ ಯಾವುದಾದರೂ ಕಾಲೇಜಿನಲ್ಲಿ ವರ್ಷಂಪ್ರತಿ ನಡೆಸುವ ಈ ವಿಶೇಷ ದತ್ತಿ ಉಪನ್ಯಾಸಕ್ಕೆ ಪ್ರಸ್ತುತ ವರ್ಷದಲ್ಲಿ ಡಾ। ವೈ. ಆರ್.ರಾವ್ ಅವರನ್ನು ಆಹ್ವಾನಿಸಲಾಗಿತ್ತು.

## ಮಹಾಭಾರತ ಕಥಾ ದರ್ಶನ ಉದ್ಘಾಟನೆ



ಪರ್ಕಳ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇಗುಲ ಬಳಿಯ ಶಿವ ಸದನದಲ್ಲಿ ಪ್ರತೀ ರವಿವಾರ ಸಂಜೆ 5.30 ರಿಂದ 7ರ ವರೆಗೆ ನಟರಾಜ ಪರ್ಕಳ ಅವರಿಂದ ನಡೆಯಲಿರುವ ಮಹಾಭಾರತ ಕಥಾ ದರ್ಶನದ ಪ್ರಥಮ ಕಾರ್ಯಕ್ರಮದ ಉದ್ಘಾಟನೆ ಸಮಾರಂಭವು ಜ. 20ರ ಅಪರಾಹ್ನ 2.30ಕ್ಕೆ ನಡೆಯಿತು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ: **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.22-02-2019 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.28-02-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.23-02-2019 ಮತ್ತು ತಾ.11-03-2019 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 13-02-2019 | ಕುಂಭ ಸಂಕ್ರಮಣ |
| 16-02-2019 | ಸರ್ವೈಕಾದಶಿ |
| 19-02-2019 | ಹುಣ್ಣಿಮೆ |
| 20-02-2019 | ಶಿಶಿರ ಋತು, ಮಾಘ ಮಾಸದ ಕೃಷ್ಣಪಕ್ಷಾರಂಭ |
| 22-02-2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.29 |
| 02-03-2019 | ಸರ್ವೈಕಾದಶಿ |
| 04-03-2019 | ಮಹಾಶಿವರಾತ್ರಿ |
| 06-03-2019 | ಅಮಾವಾಸ್ಯೆ |
| 07-03-2019 | ಶಿಶಿರ ಋತು, ಫಾಲ್ಗುಣ ಮಾಸದ ಶುಕ್ಲಪಕ್ಷಾರಂಭ |
| 14-03-2019 | ಮೀನ ಸಂಕ್ರಮಣ ಶ್ರೀಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ |
| 17-03-2019 | ಸರ್ವೈಕಾದಶಿ |
| 21-03-2019 | ಹುಣ್ಣಿಮೆ |
| 22-03-2019 | ಶಿಶಿರ ಋತು, ಫಾಲ್ಗುಣ ಮಾಸದ ಕೃಷ್ಣಪಕ್ಷಾರಂಭ |


Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

## ಶುಭ ವಿವಾಹ

ಬೆಳ್ಮಣ್ ಬೈಲುಮನೆ ಶ್ರೀ ರಮೇಶ ರಾವ್ ಮತ್ತು ಶ್ರೀಮತಿ ಶಾಂಭವಿ ಅವರ ಪುತ್ರ **ಪವನ್ ಕುಮಾರ್** ಮತ್ತು ನೆಟ್ಟಣಿಗೆ ಶ್ರೀ ಸತೀಶ ರಾವ್ ಮತ್ತು ಶ್ರೀಮತಿ ಮೂಕಾಂಬಿಕಾ ಇವರ ಪುತ್ರಿ **ಶ್ವೇತಾ** ಇವರ ವಿವಾಹವು **ತಾ.23-01-2019**ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾಮಂಟಪದಲ್ಲಿ ನೆರವೇರಿತು

★★★★ ★★★★

ದಿ। ನಾಗರಾಜ ರಾವ್ ಮತ್ತು ಶ್ರೀಮತಿ ಕಾಂತಿಲತಾದೇವಿ ಅವರ ಪುತ್ರ **ನಿಖಿಲ್** ಮತ್ತು ಶ್ರೀ ಮಹಾವೀರ ಗರ್ಗ್ ಮತ್ತು ಶ್ರೀಮತಿ ಪ್ರೇಮಲತಾ ಇವರ ಪುತ್ರಿ **ಚೇತನಾ** ಇವರ ವಿವಾಹ ಸಮಾರಂಭವು **ತಾ.23-01-2019**ರಂದು ಇಂದೋರ್ ನಲ್ಲಿ ನೆರವೇರಿತು

★★★★ ★★★★

ಸಕ್ಕಟ್ಟು ಶ್ರೀಮತಿ ಶೋಭಾ ಮತ್ತು ಶ್ರೀ ಸದಾಶಿವರಾವ್ ಇವರ ಪುತ್ರ **ರವಿಪ್ರಸಾದ** ಹಾಗೂ ಕಬ್ಬಿನಾಲೆ ಶ್ರೀಮತಿ ಸುನೀತಾ ಮತ್ತು ಶ್ರೀ ಗಣೇಶ ಹೆಬ್ಬಾರ್ ರವರ ಪುತ್ರಿ **ಸಂಧ್ಯಾ** ಇವರ ವಿವಾಹವು **ತಾ.27-01-2019**ರಂದು ಹೆಬ್ರಿ ರಾಮ ಮಂದಿರದಲ್ಲಿ ನೆರವೇರಿತು.

★★★★ ★★★★

ಪುತ್ತೂರು ಬಜತ್ತೂರು ಮಣಿಕಳ ಶ್ರೀಮತಿ ರೇವತಿ ಮತ್ತು ಶ್ರೀ ರಘುವೀರರಾವ್ ಅವರ ಪುತ್ರಿ **ಶ್ರಾವ್ಯ** ಮತ್ತು ಬಂಟ್ವಾಳ ಪರಾರಿ ಶ್ರೀಮತಿ ಅರುಣಾ ಮತ್ತು ಶ್ರೀ ಮುರಳೀಧರ ರಾವ್ ಇವರ ಪುತ್ರ **ಕಾರ್ತಿಕ್** ಇವರ ವಿವಾಹವು **ತಾ.27-01-2019**ರಂದು ಉಪ್ಪಿನಂಗಡಿ ನೇತ್ರಾವತಿ ಸಮುದಾಯ ಭವನದಲ್ಲಿ ನೆರವೇರಿತು.

★★★★ ★★★★

ಬೆಳ್ಮಣ್ ಶ್ರೀಮತಿ ಮತ್ತು ಶ್ರೀ ಭವಾನಿಶಂಕರ ರಾವ್ ಅವರ ಪುತ್ರ **ಗಣೇಶ್** ಮತ್ತು ಕಡಬ ಶ್ರೀ ಜಯಪ್ರಕಾಶ ರಾವ್ ಮತ್ತು ಶ್ರೀಮತಿ ಸ್ವಪ್ನಾ ಇವರ ಪುತ್ರಿ **ಕೃತಿಕಾ** ಇವರ ವಿವಾಹವು **ತಾ.28-01-2019**ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾಮಂಟಪದಲ್ಲಿ ನೆರವೇರಿತು

★★★★ ★★★★

ಪರ್ಕಳದ ಶ್ರೀಮತಿ ಕಾಂತಾಮಣಿ ಮತ್ತು ಶ್ರೀ ಯು.ಅಶೀತ್ ಕುಮಾರ್ ಅವರ ಪುತ್ರ **ಕಾರ್ತಿಕ ಕುಮಾರ** ಮತ್ತು ಉಚ್ಚಿಲ ದಿ। ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ವೀಣಾ ಇವರ ಪುತ್ರಿ **ವಿಜಯಶ್ರೀ** ಇವರ ವಿವಾಹವು **ತಾ.30-01-2019**ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾಮಂಟಪದಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ವಸಂತಿ ಮತ್ತು ಶ್ರೀ ಸುರೇಶ ಅವರ ಪುತ್ರ **ಅನೀಶ್** ಮತ್ತು ಕಾರ್ನಾಡು ಶ್ರೀ ಅರುಣಕುಮಾರ ಮತ್ತು ಶ್ರೀಮತಿ ಜಾನಕಿ ಇವರ ಪುತ್ರಿ **ಶಮಿತಾ** ಇವರ ವಿವಾಹವು **ತಾ.10-02-2019**ರಂದು ಎರ್ಮಾಳು ಶ್ರೀ ಜನಾರ್ಧನ ಜನಕಲ್ಯಾಣ ಮಂಟಪದಲ್ಲಿ ನೆರವೇರಿತು

## ಬ್ರಹ್ಮೋಪದೇಶ

ಪಡುಬಿದ್ರೆ ಶ್ರೀ ಸುದರ್ಶನ ಪ್ರಸಾದ ಮತ್ತು ಶ್ರೀಮತಿ ಶ್ರೀದೇವಿ ಇವರ ಪುತ್ರ **ಚಿ। ವರುಣ್**ನ ಬ್ರಹ್ಮೋಪದೇಶ ಸಮಾರಂಭವು **ತಾ.06-02-2019**ರಂದು ಪಡುಬಿದ್ರೆ ಉದಯಾದ್ರಿ ಭಾರತೀಮಂಟಪದಲ್ಲಿ ನೆರವೇರಿತು.

## ಶುಭಜನನ


ಕೂಳೂರಿನಲ್ಲಿ ವಾಸವಾಗಿರುವ ಇನ್ನ ಶ್ರೀನಿವಾಸ ರಾವ್ ಹಾಗೂ ಪುಷ್ಪಾವತಿ ದಂಪತಿಗಳ ಪುತ್ರ ಇನ್ನ ಸಂದೀಪ ರಾವ್ ಮತ್ತು ಶ್ರೀಮತಿ ಮಧುರಾ ದಂಪತಿಗಳಿಗೆ ತಾ.04.01.2019ರಂದು ಸಿಡ್ನಿಯಲ್ಲಿ ಹೆಣ್ಣುಮಗುವಿನ ಜನನವಾಗಿರುತ್ತದೆ

## ನಿಧನ

ತಾ.11-01-2019ರಂದು ಬೈಕಾಡಿ ಕಾಮೇಶ್ವರದ ಬಳಿ ವಾಸವಾಗಿದ್ದ ಬೈಕಾಡಿ ಬಾಬು ರಾವ್ ರವರು ತನ್ನ 82 ನೆಯ ವಯಸ್ಸಿನಲ್ಲಿ ನಿಧನರಾದರು


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**


ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು







## ಪಾವಂಜೆಯಲ್ಲಿ ಸುಮನಾ ಪ್ರಶಾಂತ್‌ರವರ ಸಂಗೀತ ಕಛೇರಿ



ಪಾವಂಜೆ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ ಸ್ಮರಣಾರ್ಥ ಪಾವಂಜೆ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ನಡೆದ ಆರಾಧನೋತ್ಸವ 2019 ಕಾರ್ಯಕ್ರಮದಲ್ಲಿ ಪುತ್ತೂರಿನ ಶ್ರೀಮತಿ ಸುಮನಾ ಪ್ರಶಾಂತ್ ಇವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ನೀಡಿದರು. ಪಕ್ಕವಾದ್ಯದಲ್ಲಿ ಶರ್ಮಿಳಾ ರಾವ್ ಮತ್ತು ಮೃದಂಗದಲ್ಲಿ ಬಾಲಚಂದ್ರ ಭಾಗವತ್ ಇವರು ಸಹಕರಿಸಿದರು.

## ವಿಕಾಸ ಕವಿ ಬಿ.ವಿ.ರಾವ್‌ರವರ ಕಾವ್ಯ ವಾಚನ



ಬೆಂಗಳೂರಿನ ವಿಕಾಸ ಕವಿ ಶ್ರೀ ಬಿ.ವಿ.ರಾವ್ ಅವರು ತಾ.13.01.2019ರಂದು ಕ್ಯಾತಸಂದ್ರದ ಸಿದ್ದಗಂಗ ಮಠದಲ್ಲಿ 5000 ವಿದ್ಯಾರ್ಥಿಗಳು ಮತ್ತು ಇತರ ಸಜ್ಜನರ ಎದುರು ದೈನಿಕ ಪ್ರಾರ್ಥನಾ ಸಭೆಯಲ್ಲಿ ತಮ್ಮ ಕವನಗಳ ಕಾವ್ಯ ವಾಚನ ಮಾಡಿದರು. ಶ್ರೀ ವಿ.ಯಸ್.ನಾಗರಾಜು ಸಾರ್ವಜನಿಕ ಸಂಪರ್ಕ ಅಧಿಕಾರಿ ಅವರು ಸಭೆಗೆ ಕವಿಯ ಪರಿಚಯ ಮಾಡಿದರು. ಕನ್ನಡ ಶಾಂತಿ ಮಂತ್ರದಿಂದ ಆರಂಭ ಮಾಡಿ, ಬಿಲ್ವಅರ್ಚನೆ, ಶಂಕರನೆಲ್ಲಿ, ಪ್ರಕೃತಿಗೆ ನಿವೇದನೆ, ಶಿವ ಪಾದಕೆ ಇತ್ಯಾದಿ ಕವನಗಳನ್ನು ವಾಚಿಸಿದರು. ಇನ್ನೊಂದು ಕನ್ನಡ ಶಾಂತಿ ಮಂತ್ರದಿಂದ ವಾಚನ ಮುಗಿಯಿತು. ಶ್ರೀ ಮಠದಿಂದ ಕವಿಗಳಿಗೆ ಸನ್ಮಾನವಾಯಿತು. ಕವಿಯಿಂದ ಶ್ರೀ ಮಠಕ್ಕೆ ಧನ್ಯವಾದ ಅರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಕಾವ್ಯ ವಾಚನ ಬಹಳ ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರವಾಯಿತು.

## ರೋಗಿಗಳಿಗೆ ಬಿಸಿಯೂಟ



ಕಾಸರಗೋಡಿನ ಬಿ.ಇ.ಎಮ್ ಹೈಸ್ಕೂಲ್ ಹಾಗೂ ಕೂಡ್ಲು ಶ್ರೀ ಗೋಪಾಲಕೃಷ್ಣ ಹೈಸ್ಕೂಲ್‌ಗಳಲ್ಲಿ ಚಿತ್ರಕಲಾ ಅಧ್ಯಾಪಕರಾಗಿದ್ದ, ದಿವಂಗತ ಕೂಡ್ಲು ಗೋಪಾಲಕೃಷ್ಣ ಶ್ಯಾನುಭೋಗ್ ಸ್ಮರಣಾರ್ಥ ನುಳ್ಳಿಪಾಡಿ ಆಯುರ್ವೇದ ಆಸ್ಪತ್ರೆ ಹಾಗೂ ನಗರದ ಸರಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಒಂದು ದಿನದ ಉಚಿತ ಬಿಸಿಯೂಟ ವಿತರಣೆ ಕಾರ್ಯಕ್ರಮ ನಡೆಯಿತು. ಕಲಾವಿದ ಕೆ.ಜಿ.ಎಸ್ ಟ್ರಸ್ಟ್‌ನ ಅಧ್ಯಕ್ಷ ವಿಷ್ಣು ಶ್ಯಾನುಭೋಗ್, ಕಾರ್ಯದರ್ಶಿ ಪ್ರಸನ್ನ ಶ್ಯಾನುಭೋಗ್, ಉಪಸ್ಥಿತರಿದ್ದರು.


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE



**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

## ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಕಿರು ಪ್ರವಾಸ




ಮಂಗಳೂರು ಸುಬ್ರಹ್ಮಣ್ಯ ಸಭಾ ಇದರ ನೇತೃತ್ವದಲ್ಲಿ ದಿನಾಂಕ 22-01-2019ರ ಭಾನುವಾರದಂದು ಮಂಗಳೂರಿನಿಂದ ಸುಮಾರು 60 ಕಿ. ಮಿ. ದೂರ ಇರುವ ಆರ್ಯನ್ ರೆಸಾರ್ಟ್ ಉಡುಪಿ, ಇಲ್ಲಿಗೆ 35 ಸದಸ್ಯರ ತಂಡದೊಂದಿಗೆ ಒಂದು ದಿನದ ಕಿರು ಪ್ರವಾಸ ನಡೆಯಿತು.

ಮಂಗಳೂರಿನಿಂದ ಆರಂಭವಾದ ಪ್ರವಾಸಕ್ಕೆ ಪಡುಬಿದ್ರೆ ಉದಯಾದ್ರಿ ಬಾಲಗಣಪತಿ ದೇವಸ್ಥಾನದ ಪ್ರಾಂಗಣದಲ್ಲಿ ಫಲಾಹಾರದ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ಫಲಾಹಾರದ ನಂತರ ಆರ್ಯನ್ ರೆಸಾರ್ಟ್‌ಗೆ ನಮ್ಮ ಬಸ್ಸು ಬೆಳಿಗ್ಗೆ 10.00 ಗಂಟೆಗೆ ತಲುಪಿತು. ಪ್ರಕೃತಿ ರಮಣೀಯ ಪರಿಸರ, ಪ್ರಶಾಂತ ವಾತಾವರಣ, ಸ್ವಚ್ಛವಾದ ಶುಭ್ರವಾದ ಈಜುಕೊಳ, ಕೊಳದ ಮಧ್ಯದಲ್ಲಿ ಜಂಗಲ್ ವಾಟರ್ ಪಾರ್ಕ್, ಪಕ್ಕದಲ್ಲಿ ಮಕ್ಕಳ ಆಟವಾಡುವ ಪಾರ್ಕ್ ರೆಸಾರ್ಟ್ ಕಟ್ಟಡ, ನೋಡಿ ನಮಗೆಲ್ಲಾ ತುಂಬಾ ಸಂತೋಷವಾಯಿತು. ಶ್ರೀ ರಘುವೀರ ಪೆರ್ಡೂರು ಇವರು ಎಲ್ಲಾ ಸದಸ್ಯರನ್ನು ನಿಲ್ಲಿಸಿ ಛಾಯಾ ಚಿತ್ರ ತೆಗೆದರು. ಆರ್ಯನ್ ರೆಸಾರ್ಟನ ಈಜುಕೊಳ ಹಾಗೂ ಸುತ್ತಮುತ್ತ ಪ್ರಕೃತಿ ರಮಣೀಯ ದೃಶ್ಯವನ್ನು ಅಸ್ವಾದಿಸುತ್ತಾ ಕಲಾಕೃತಿಯನ್ನು ರಚಿಸಿದರು!

ರೆಸಾರ್ಟ್‌ನಲ್ಲಿ ಸದಸ್ಯರು ಈಜು ಕೊಳದಲ್ಲಿ ನೀರಾಟ, ಈಜಾಟ, ಸಂಗೀತಕ್ಕೆ ತಕ್ಕಂತೆ ನರ್ತಿಸುವುದು ಹೀಗೆ ಕುಣಿದು ಕುಪ್ಪಳಿಸಿ ಸಂತಸಪಟ್ಟರು. ಮಧ್ಯಾಹ್ನ 1.15ಕ್ಕೆ ಸರಿಯಾಗಿ ರೆಸಾರ್ಟ್‌ನವರ ವತಿಯಿಂದ ಭೋಜನದ ವ್ಯವಸ್ಥೆ ಮಾಡಲಾಗಿತ್ತು

ನಂತರ ವಿವಿಧ ಆಟೋಟ ಸ್ಪರ್ಧೆಗಳನ್ನು ಶ್ರೀ ಪಿ. ಶ್ರೀಕಾಂತ್ ರಾವ್ ಮತ್ತು ಶ್ರೀಮತಿ ಅರುಣಾ ಸೋಮಶೇಖರ್ ಇವರು ನಡೆಸಿಕೊಟ್ಟರು. ನಂತರ ಲಘು ಉಪಾಹಾರ ಮುಗಿಸಿ ನಮ್ಮ ಮರು ಪ್ರಯಾಣವನ್ನು ಆರಂಭಿಸಿದೆವು. ಮಂಗಳೂರಿಗೆ 5.45 ಗಂಟೆಗೆ ತಲುಪುವುದರೊಂದಿಗೆ ಪ್ರವಾಸ ಮುಕ್ತಾಯವಾಯಿತು.

## ಸಂಘದ ನೂತನ ಕಛೇರಿಯ ಕೊಠಡಿ ಉದ್ಘಾಟನೆ



ಶ್ರೀಶಾರದಾ ಮಂಟಪದ ಸಭಾಭವನದ ಪ್ರವೇಶ ದ್ವಾರದ ಬಳಿ ನೂತನ ಆಡಳಿತ ಮಂಡಳಿ ಕಛೇರಿಯನ್ನು ಇತ್ತೀಚೆಗೆ ರಚಿಸಲಾಗಿತ್ತು. ಅದನ್ನು ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಉದ್ಘಾಟಿಸಿದರು.

## ಶ್ರೀಶಾರದಾ ಭಜನಾ ಮಂಡಳಿಯಿಂದ ಚೊಕ್ಕಾಡಿಯಲ್ಲಿ ಭಜನೆ



ತಾ.10-02-2019ರಂದು ಚೊಕ್ಕಾಡಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಭಜನಾ ಮಂಡಳಿಯ ಸದಸ್ಯರು ಭಜನಾ ಕಾರ್ಯಕ್ರಮವನ್ನು ನೀಡಿದರು.

## ಶ್ರೀ ಸಭಾದ ಭಜನಾ ಕಾರ್ಯಕ್ರಮ



ಪಾವಂಜೆ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತಾ. 15-01-2019ರಂದು ನಡೆದ ಹರಿದಾಸ ಶ್ರೀ ಲಕ್ಷ್ಮೀನಾರಾಯಣಪ್ಪಯ್ಯ ನವರ ಸಂಸ್ಮರಣ ಭಜನಾ ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿಯು ಶ್ರೀಯುತರ ಭಜನೆಗಳನ್ನು ಹಾಡಿ ಭಜನಾ ಸೇವೆ ನಡೆಸಿತು. ಶ್ರೀ ಹರಿನಾರಾಯಣ ರಾವ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸಭಾದ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀ ನಾಗರಾಜ ಶರ್ಮ ವ್ಯವಸ್ಥೆಗಳಲ್ಲಿ ಮತ್ತು ಶ್ರೀ ಕಾರ್ತಿಕ ಕುಡುಪು ತಬಲಾದಲ್ಲಿ ಸಹಕರಿಸಿದರು.

## ಶ್ರೀ ಪ್ರಪುಲ್ಲಚಂದ್ರ ರಾಯರಿಗೆ ಸನ್ಮಾನ



ಶ್ರೀ ಕ್ಷೇತ್ರ ಶೃಂಗೇರಿಯ ಶ್ರೀ ಶ್ರೀ ಭಾರತೀತೀರ್ಥ ಸಾಂಸ್ಕೃತಿಕ ಮತ್ತು ಜಾನಪದ ಅಧ್ಯಯನ ಕೇಂದ್ರ ಟ್ರಸ್ಟ್ (ರಿ.) ವತಿಯಿಂದ ಪ್ರತಿ ವರ್ಷ ಮಲೆನಾಡು ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅದರಂತೆ ಈ ವರ್ಷ ದಿನಾಂಕ 10-01-2019ರಂದು ಸಂಜೆ ನಡೆದ ಮಲೆನಾಡು ಉತ್ಸವ -2019ರ ಸಭಾ ಕಾರ್ಯಕ್ರಮದಲ್ಲಿ ಕ.ಸಾ.ಪ.ನ ಮಾಜಿ ಅಧ್ಯಕ್ಷರಾದ ಗುಡ್ಡತೋಟ ನಟರಾಜರ ಅಧ್ಯಕ್ಷತೆಯಲ್ಲಿ, ಮುಖ್ಯ ಅತಿಥಿಗಳಾದ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಶ್ರೀ ಶೃಂಗೇರಿ ಶಿವಣ್ಣ ಮತ್ತು ಟ್ರಸ್ಟ್‌ನ ವಿಶ್ವಸ್ಥರಾದ ಶ್ರೀ ಪರಾಶರ ಇವರ ಸಮ್ಮುಖದಲ್ಲಿ ರಂಗನಟ ರವಿಕುಮಾರ್ ಹಾಗೂ ಸಾಮಾಜಿಕ ಮತ್ತು ಕೃಷಿ ಕಾರ್ಯಕರ್ತ ಶ್ರೀ ಗೌರೀ ಪ್ರಕಾಶ್ ಜೊತೆಯಲ್ಲಿ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ಉಡುಪಿ ಜಿಲ್ಲೆಯ ಸಂಚಾಲಕರಾದ ಶ್ರೀ ಪ್ರಪುಲ್ಲಚಂದ್ರ ರಾವ್ ಉಡುಪಿ ಇವರನ್ನು ಶಾಲು, ಹಾರ, ಫಲ, ಪುಷ್ಪ, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರದೊಂದಿಗೆ ಸನ್ಮಾನಿಸಲಾಯಿತು.


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

# ಸಂಘದ ಸ್ಥಾಪಕ ಸದಸ್ಯ ಎಸ್.ಗೋಪಿಚಂದ ರಾವ್ ನಿಧನ



ಶ್ರೀಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದ, ನಿವೃತ್ತ ಶಿಕ್ಷಕ, ಶಿಕ್ಷಣ, ಸಾಹಿತ್ಯ, ಪತ್ರಿಕೋದ್ಯಮ, ಹಿಂದಿ ಭಾಷೆಯ ಪ್ರಚಾರ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿರುವ ಎಸ್. ಗೋಪಿಚಂದ ರಾವ್ (87) ಅವರು ಮಣಿಪಾಲದ ಆಸ್ಪತ್ರೆಯಲ್ಲಿ ತಾ.16.01.2019ರಂದು ನಿಧನ ಹೊಂದಿದರು. ಮೃತರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಶಿರ್ವ ಮಾಣಿಬೆಟ್ಟು ಮೂಲದ ಇವರು ಪಣಿಯಾಡಿ ನಿವಾಸಿಯಾಗಿದ್ದು ಕನ್ನಡ, ಹಿಂದಿ ಮತ್ತು ಸಂಸ್ಕೃತಗಳಲ್ಲಿ ಪಂಡಿತರಾಗಿದ್ದರು. 'ಗೋರಾ' ಕಾವ್ಯನಾಮದಲ್ಲಿ ಕಥಾ ಕೌಮುದಿ, ಬಿರಿದ ಮುಗುಳು, ಹಸುರು ಕನಸು, ವೀರಜನನಿ, ನಗೆಗಡಲು ಮುಂತಾದ ಸಾಹಿತ್ಯ ಕೃತಿಗಳನ್ನು ರಚಿಸಿದ್ದರು. ನವಯುಗ ಪತ್ರಿಕೆಯಲ್ಲಿ 25 ವರ್ಷ ಕಾಲ ಉಪ ಸಂಪಾದಕರಾಗಿದ್ದರು. ನಾಡಿನ ಅನೇಕ ಪತ್ರಿಕೆಗಳಲ್ಲೂ ಇವರ ಲೇಖನ ಪ್ರಕಟವಾಗಿತ್ತು.

ಪೆರ್ಡೂರು, ನಿಟ್ಟೂರು ಹಾಗೂ ಯು.ಕಮಲಾ ಬಾಯಿ ಪ್ರೌಢಶಾಲೆಯಲ್ಲಿ ಸುದೀರ್ಘ ಕಾಲ ಅಧ್ಯಾಪಕರಾಗಿದ್ದರು. ಸ್ಥಾನಿಕ ಸೇವಾ ಸಮಾಜ ಮತ್ತು ಟ್ರಸ್ಟ್‌ನ ಅಧ್ಯಕ್ಷರಾಗಿದ್ದರು. ಕಲಾವೃಂದ ಮತ್ತು ಗೀತಾಭವನದ ಕಾರ್ಯದರ್ಶಿಯಾಗಿ, ಉಡುಪಿಯ ಹಿಂದಿ ಪ್ರಚಾರ ಪರಿಷತ್, ಮಾರುತಿ ಗ್ರಂಥಾಲಯ, ರಾತ್ರಿ ಶಾಲೆ ಸ್ಥಾಪನೆಯಲ್ಲೂ ಮಹತ್ವದ ಪಾತ್ರ ವಹಿಸಿದ್ದರು. ಉಡುಪಿ ಪೇಜಾವರ ಮಠದ ಪ್ರಹ್ಲಾದ ಗುರುಕುಲದ ಸಂಸ್ಥಾಪಕ ಪ್ರಾಂಶುಪಾಲರಾಗಿದ್ದರು. ಇವರಿಗೆ ಹೊಸದಿಲ್ಲಿಯ ಬೋರ್ಡ್ ಆಫ್ ಹೈಯರ್ ಎಜುಕೇಶನ್ ಸಂಸ್ಥೆಯು "ಸಾಹಿತ್ಯ ವಾಚಸ್ಪತಿ" ಮತ್ತು "ವಿದ್ಯಾ ವಾಚಸ್ಪತಿ" ಪ್ರಶಸ್ತಿ ನೀಡಿ ಗೌರವಿಸಿದೆ.

ಇವರು ಶ್ರೀ ಅಂಬಲ್ಪಾಡಿ ಕೃಷ್ಣರಾವ್, ಶ್ರೀ ಅಲೆವೂರು ಶ್ಯಾಮರಾವ್ ಮತ್ತಿತರರೊಂದಿಗೆ ನಮ್ಮ ಸಂಘದ ಸ್ಥಾಪನೆಗೆ ಕಾರಣೀಭೂತರಾಗಿದ್ದರು. ಅವರನ್ನು ಕಳೆದ ವರ್ಷ ಶ್ರೀಶಾರದಾ ಮಂಟಪದಲ್ಲಿ ನಡೆದ ಸುವರ್ಣ ಸಂಭ್ರಮ ಸಮಾರಂಭದಲ್ಲಿ ಸನ್ಮಾನಿಸಲಾಗಿತ್ತು. ಶ್ರೀಸ್ಥಾನಿಕ ಬ್ರಾಹ್ಮಣ ಸಂಘವು ಶ್ರೀಯುತರ ಅಗಲಿಕೆಗೆ ಸಂತಾಪ ಸೂಚಿಸುತ್ತಾ ಅವರ ಕುಟುಂಬದವರಿಗೆ ಶ್ರೀಯುತರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಶ್ರೀಶಾರದೆಯನ್ನು ಪ್ರಾರ್ಥಿಸುತ್ತದೆ.

## ಚಿಣ್ಣರ ಅಂಗಳ





ಸುಮಾಶ್ರೀ, ಕಡಬ ಸುರೇಶ ರಾಯರ ಪುತ್ರಿ. 2ನೇ ವರ್ಷದ ಬಿ.ಇ.

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436
DEEPA ENTERPRISES
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

With Best Compliments From :
Land™ Trades
BUILDERS & DEVELOPERS
UPGRADE TO A NEW LIFESTYLE
Premium Projects in Mangalore


9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

With Best Compliments From :
***Rajathadri Hotel Pvt. Ltd.
Lodging & Boarding


Sri Ramesh Shanubhag, Usha, Sanketh and Kavitha
Directors
OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water
SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org